**ಎಲ್.ಎ.ಸಿ ನಂ. 2/2023** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 13.12.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಮಾನ್ಯ ಎ.ಜಿ.ಪಿ ರವರಿಂದಃ</u>**

ನಾನು ಎದುರುದಾರರ ಕಛೇರಿಯಿಂದ ಭೂಸ್ವಾಧೀನಗೊಂಡಿರುವ ಬಗ್ಗೆ ಪರಿಹಾರ ಪಡೆದು 22 ವರ್ಷವಾಗಿರುತ್ತದೆ. ಚಾಮನಹಳ್ಳಿ ಗ್ರಾಮದ ಸರ್ವೆ ನಂ.7/1ರ 37 ಗುಂಟೆ ಜಮೀನು ಭೂಸ್ವಾಧೀನವಾಗಿರುತ್ತದೆ. ಎದುರುದಾರರ ಕಛೇರಿಯಿಂದ ಪರಿಹಾರ ಹಣವನ್ನು ಪಡೆದುಕೊಳ್ಳಲು ನಮೂನೆ-12(2) ನ್ನು 20 ವರ್ಷಗಳ ಹಿಂದೆ ಪಡೆದಿರುತ್ತೇನೆ. ಭೂಸ್ವಾಧೀನವಾಗಿ ಉಳಿದಿರುವ ಆಸ್ತಿಯು ಇಂಡೀಕರಣವಾಗಿರುವ ಬಗ್ಗೆ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರು ತಾನು ಹಾಜರುಪಡಿಸಿರುವ ದಾಖಲೆಯನ್ನು ನೋಡಿ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ವಕೀಲರಿಗೆ ನೀಡಿರುತ್ತೇನೆ ಎನ್ನುವರು. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನಿಗದಿತ ಅವಧಿಯೊಳಗೆ ಹೆಚ್ಚಿನ ಪರಿಹಾರ ಸಿಗಬೇಕೆಂದು ಅರ್ಜಿ ಸಲ್ಲಿಸಲು ತೊಂದರೆ ಇತ್ತು. ಯಾವ ತೊಂದರೆ ಇತ್ತು ಎಂದರೆ ಸಾಕ್ಷಿದಾರರು ಸದರಿ ಸಮಯದಲ್ಲಿ ನನ್ನ ತಾಯಿ ತೀರಿಕೊಂಡಿದ್ದರು ಎನ್ನುವರು. ನನ್ನ ತಾಯಿ ತೀರಿಕೊಂಡು 18 ವರ್ಷವಾಗಿರುತ್ತದೆ. ಭೂಸ್ವಾಧೀನವಾಗಿರುವ ಜಮೀನಿನಲ್ಲಿ ಬೆಳೆ ಬೆಳೆಯಲು ನೀರಿನ ವ್ಯವಸ್ಥೆಗಾಗಿ ಬೋರ್ವೆಲ್ ಇರಲಿಲ್ಲ. ಹತ್ತಿ, ಟೊಮಟೋ ಮತ್ತು ಬೀನ್ಸ ಬೆಳೆಯಲು ನೀರಾವರಿ ಸೌಲಭ್ಯ ಬೇಕು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ 1 ಎಕರೆಯಲ್ಲಿ ವರ್ಷಕ್ಕೆ 1 ಲಕ್ಷ ಆದಾಯ ಪಡೆಯುತ್ತಿದ್ದ ಬಗ್ಗೆ ದಾಖಲೆಯನ್ನು ವಕೀಲರಿಗೆ ನೀಡಿರುತ್ತೇನೆ. ನಿಪಿ3 ರಲ್ಲಿ ಹೇಳಿರುವ ಆಸ್ತಿಯು ಚಾಮನಹಳ್ಳಿ ಗ್ರಾಮದಲ್ಲಿರುತ್ತದೆ. ಸದರಿ ಆಸ್ತಿಯ ಮಾಲೀಕರ ಹೆಸರು ಪುಟ್ಟೇಗೌಡ ಆಗಿರುತ್ತದೆ. ಸದರಿ ಪುಟ್ಟೇಗೌಡ ರವರ ಎಷ್ಟು ಜಮೀನು ಭೂಸ್ವಾಧೀನವಾಗಿರುತ್ತದೆ ಮತ್ತು ಅದರ ಸರ್ವೆ ನಂಬರ್ ಏನು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಜಮೀನು ಮತ್ತು ಸದರಿ ಜಮೀನಿನ ನಡುವೆ ಇನ್ನೊಂದು ಜಮೀನು ಇರುತ್ತದೆ. ಈಗಾಗಲೇ ಎದುರುದಾರರು ಮಾರುಕಟ್ಟೆ ಮೌಲ್ಯಕ್ಕೆ ಅನುಗುಣವಾಗಿ ಪರಿಹಾರ ನೀಡಿದ್ದು ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ನಿಗದಿತ ಸಮಯದಲ್ಲಿ ಹೆಚ್ಚಿನ ಪರಿಹಾರ ಕೋರಿ ಅರ್ಜಿ ಸಲ್ಲಿಸದಿರುವುದರಿಂದ ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಕಾಲ ವಿಳಂಬವಾಗಿ ಅರ್ಜಿ ಸಲ್ಲಿಸಿರುವ ವಿಚಾರ ಗೊತ್ತಿದ್ದರೂ ಸಹ ಸರ್ಕಾರದಿಂದ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.